VIJAYAKUMAR KANNUR
Digitally signed by VIJAYAKUMAR KANNUR
Date: 2025.10.04 10:37:17 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 03.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ RSH ವಕೀಲರಿಂದ :**

ನಿಪಿ 7 ರಿಂದ 26 ರ ದಾಖಲೆಗಳು ಈ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈ ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ದೂರಿನಲ್ಲಿ ನನ್ನ ಪರವಾಗಿ ಸಾಕ್ಷಿಧಾರರ ವಿಚಾರಣೆಯ ಪಟ್ಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ಹೆಂಡತಿಯ ಬ್ಯಾಂಕ್ ಖಾತೆಯಿಂದ ಆರೋಪಿಯ ಬ್ಯಾಂಕ್ ಖಾತೆಗೆ ಯಾವುದೇ ಹಣ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ಸ್ಟೇಟಮೆಂಟ್ ಗಳನ್ನು ನಾನು ಹಾಜರು ಪಡಿಸಿರುವೆನು. ನಾನು ಹಾಜರು ಪಡಿಸಿರುವ ನನ್ನ ಹೆಂಡತಿಯ ಸಂಬಳದ ಸ್ಟೇಟಮೆಂಟ್ ಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 26 ರ ದಾಖಲೆಯ ಪ್ರಕಾರ ನಾವು ಜಮೀನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಈ ದಾಖಲೆಯಲ್ಲಿ ನಮ್ಮ ಮನೆತನದ ಅಡಚಣೆಯ ಸಲುವಾಗಿ ಹಾಗೂ ವಗೈರೆ ಕಾರಣಗಳಿಗೆ ನನಗೆ ನಗದು ಹಣದ ಅವಶ್ಯಕತೆ ಇರುವುದರಿಂದ ಈ ಜಮೀನಕಿ ಮಾರಾಟ ಮಾಡಿರುವುದಾಗಿ ಎಂದು ಅದರಲ್ಲಿ ನಮೂದು ಇರುವುದು ಎಂದರೆ ಸರಿ, ಆದರೆ ಆ ಖರೀದಿ ಪತ್ರದ ಪಾರಮೆಟ್ ನಲ್ಲಿ ಹಾಗೆ ಇರುವುದು ಎಂದು ಸಾಕ್ಷಿ ಉತ್ತರಿಸವರು. ನಿಪಿ 26 ರ ದಾಖಲೆಯ ಮೇಲಿನ ಸಂಗತಿಗಳನ್ನು ನಾನು ಓದಿಯೇ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ 26 ರ ದಾಖಲೆಯ ಪ್ರಕಾರ ನನ್ನ ಮನೆತನಕ್ಕೆ ಹಣದ ಅಡಚಣೆ ಇರುವುದರಿಂದ ನಾನು ಆರೋಪಿಗೆ ಕೈಗಡ ಸಾಲ ನೀಡಿರುವುದಾಗಿ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕೌಟುಂಬಿಕವಾಗಿ ಮನೆ, ಜಮೀನು ಹೊಂದಿರುವುದರಿಂದ ಆರ್ಥಿಕವಾಗಿ ಸದೃಡವಾಗಿರುವುದರಿಂದ ಕೈಗಡ ರೂಪದಲ್ಲಿ ಹಣ ತೆಗೆದುಕೊಳ್ಳುವ ಯಾವುದೇ ಪ್ರಸಂಗ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಖಾತೆಯಿಂದ ಆರೋಪಿಯ ಖಾತೆಗೆ ಹಣ ವರ್ಗಾವಣೆ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಸಲುವಾಗಿ ನಾನು ನಿಪಿ 7 ರಿಂದ 26 ರ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.10.04 10:37:21 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ